


ನಗು ಮಗುವೇ
ಚಂದಿರನ ಕಾಣಿಸುವ ಭಾಗ್ಯ ಬರಲೆಂದು
ಅನ್ನದಾ ಬಟ್ಟಲಿಗೆ ನಿನ್ನ ನೆನಪಿಂದು
ಗುಮ್ಮನಿಗೂ ಆಸೆ ನಿನ್ನ ಕಾಣಲೆಂದು
ಸೆರಗಲಿ ಮುಖಮುಚ್ಚಿ ಅರ್ಧ ಕಣ್ಣಿಗೆ ಸರಿಸಿ
ಪಿಳಿಪಿಳಿಸಿ ಕಣ್ಣುಗಳ ತುಳಿಕಿಸಿದ ಚಂದ್ರನ ಕಾಂತಿಯ
ಒಮ್ಮೆ ನಿನ್ನ ಮುಡಿಗೇರಿಸಿ ನಲಿಯದಿಹೆಯಾ

ನಗು ಮಗುವೇ
ನಿನ್ನ ಕನಸಲಿ ಏನು ಬಂದಿಹುದೋ ಕನಸಿ
ಮರುಳು ನಗೆಯಲಿ ಕಂಡ ಬೆರಗನು ನೆನಸಿ
ಬೆಪ್ಪಾಗುತಿದ್ದ ನಿನ್ನ ಬಾಲ್ಯವ ನೆನಸಿ
ಮಳೆಯು ಚಳಿ ಗಾಳಿ ಬೀಸಿದ ಹಾಗೆ
ಋತುಗಳಿಗೆ ಸುಮ್ಮಾನ ನೆನಪು ಬೆರಗಿನ ಹಾಗೆ
ಹೊಳೆವ ಕಾಂತಿಯ ಬೆರಗಲಿ ಸೂರ್ಯನುದಿಸಿದ ಹಾಗೆ
ನಗುವ ಪ್ರಯತ್ನಗಳಲಿ ಯಶಪಡೆಯಲೆಂದರಸುವೆ
ನಗು ಮಗುವೆ

ನಗು ಮಗುವೆ
ಅಜ್ಜನ ಹೆಗಲಲಿ ಕೂತು ಊರ ನೋಡಿದೆ
ಎತ್ತರದ ಕಣ್ಣಲ್ಲಿ ಉತ್ತರವ ಹುಡುಕಿದೆ
ಬಾಳ ಭಾರದಲಿ ಬೆನ್ನು ಬಾಗಿರಲೀಗ
ಕೊರಗದೆ ಮರುಗದೆ ನಗು ಮಗುವೆ
ಕನವರಿಸು ಹೂವಿನ ವಸಂತದ ಬಯಕೆಗಳ
ಚರ್ಮ ಸುಕ್ಕುಗಟ್ಟಿರಬಹುದು ತಲೆ ನೆರೆತಿರಬಹುದು
ದೇಹ ಸೊರಗಿರಬಹುದು
ಮತ್ತೆ ಹೋಗಲಾರೆವೇ ಕಿಶೋರತೆಗೆ
ಒಂದೇ ಜಿಗಿತ ಹಿಂದಕೆಂದೆನದೆ ದಾಟುತ್ತಿರು
ನಿನ್ನ ಇರವನು ನೆನೆಸಿ ತಾಕುತ್ತಿರಲಿ ನೆನಪಿನ ಅಲೆ ಬಾಲ್ಯದೆಡೆಗೆ

